# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 183(11) |
| ಸದಸ್ಯರ ಹೆಸರು | : | ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 14-09-2021 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಐದು ವರ್ಷಗಳ ಕಾಲಮಿತಿಯ ಸ್ಮಾರ್ಟ್ ಸಿಟಿ ಯೋಜನೆ ಆರು ವರ್ಷ ಕಳೆದರೂ ಬೆಳಗಾವಿ ಜಿಲ್ಲೆಯಲ್ಲಿ ಇನ್ನೂ ವೇಗ ಪಡೆಯದಿರಲು ಕಾರಣವೇನು; | • ಸ್ಮಾರ್ಟ್ ಸಿಟಿ ಅಭಿಯಾನವು ಇತರೆ ಯೋಜನೆಗಳಿಂದ ಭಿನ್ನವಾಗಿದ್ದು, ಹಲವು ಹೊಸ ರೀತಿಯ ನಿಯಮಾವಳಿಗಳ ರಚನೆ ಹಾಗೂ ಪಾಲನೆ ಅಗತ್ಯವಾಗಿರುತ್ತದೆ. ಈ ನಿಯಮಗಳನ್ನು ರೂಪಿಸಲು ಸಾಕಷ್ಟು ಕಾಲಾವಧಿ ಹಿಡಿದಿರುತ್ತದೆ. ವಿಶೇಷ ಉದ್ದೇಶಿತ ವಾಹನಗಳ ಸ್ವಾಯತ್ತತೆ ಮತ್ತು ಸ್ವತಂತ್ರ ಕಾರ್ಯಾಚರಣೆಗಾಗಿ ವಿಶೇಷವಾದ ಆರ್ಥಿಕ ಅಧಿಕಾರವನ್ನು ಸರ್ಕಾರವು ಅಭಿಯಾನದ ಮಾರ್ಗಸೂಚಿಯಂತೆ ಪ್ರತ್ಯಾಯೋಜಿಸಿರುತ್ತದೆ. ಈ ರೀತಿ ಅಧಿಕಾರಗಳ ಪ್ರತ್ಯಾಯೋಜನೆಯು ಒಂದು ನೂತನ ಪ್ರಯೋಗವಾಗಿದ್ದು, ಇವುಗಳನ್ನು ಅಳ್ಳೆರುಗೊಳಿಸಲು ಸಾಕಷ್ಟು ಹೆಚ್ಚಿನ ಕಾಲಾವಕಾಶ ಹಿಡಿದಿರುತ್ತದೆ.<br><br>• ಸ್ಮಾರ್ಟ್ ಸಿಟಿ ಪ್ರಸ್ತಾವನೆಯಲ್ಲಿರುವ ಯೋಜನೆಗಳಿಗೆ ಕಾಮಗಾರಿ ಸ್ಥಳಗಳ ಸರ್ವೇ ಕೈಗೊಂಡು ಪರಿಕಲ್ಪನಾ ವರದಿ ಹಾಗೂ ವಿಸ್ತೃತಾ ಯೋಜನಾ ವರದಿಗಳನ್ನು ತಯಾರಿಸಲು ಕಾಲಾವಧಿಯು ಅಗತ್ಯವಿತ್ತು.<br><br>• ನೂತನವಾಗಿ ಸ್ಥಾಪಿಸಲಾಗಿರುವ ವಿಶೇಷ ಉದ್ದೇಶಿತ ವಾಹನಗಳಿಗೆ ಮಾನವ ಸಂಪನ್ಮೂಲ ನೇಮಕಾತಿಗೂ ಹೆಚ್ಚಿನ ಕಾಲಾವಧಿ ಹಿಡಿದಿರುತ್ತದೆ.<br><br>• ಯೋಜನೆಯಡಿ ಪ್ರಮುಖವಾಗಿ ಸ್ಮಾರ್ಟ್ ರಸ್ತೆಗಳ ಅಭಿವೃದ್ಧಿ, ಒಳಚರಂಡಿ ಹಾಗೂ ಇನ್ನಿತರೆ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದ್ದು, ಸದರಿ ಯೋಜನೆಗಳನ್ನು ನಗರದ ಜನನಿಬಿಡ ಪ್ರದೇಶಗಳಲ್ಲಿ ಅನುಷ್ಠಾನಗೊಳಿಸಬೇಕಾಗಿದ್ದು, ಸ್ಥಳೀಯವಾಗಿ ಬಹಳ ಸಮಸ್ಯೆಗಳನ್ನು ಎದುರಿಸಬೇಕಾಗಿರುತ್ತದೆ. ಅಲ್ಲದೇ, ಈ ಯೋಜನೆಗಳಲ್ಲಿ ಬೆಸ್ಕಾಂ ಬಿಎಸ್‌ಎನ್‌ಎಲ್, ನೀರು ಸರಬರಾಜು ಮಂಡಳಿ ಹಾಗೂ ಇತರೆ ಇಲಾಖೆಗಳ ಯುಟಿಲಿಟಿ ಶಿಫ್ಟಿಂಗ್ ಅವಶ್ಯಕತೆಯಿದ್ದು, ಇದರಿಂದ ಕಾಮಗಾರಿಗಳ ಅನುಷ್ಠಾನದಲ್ಲಿ ಅನಿವಾರ್ಯ ವಿಳಂಬವಾಗುತ್ತಿದೆ.<br><br>• ಸ್ಮಾರ್ಟ್ ರಸ್ತೆಗಳ ಅಭಿವೃದ್ಧಿ ಯೋಜನೆಯಲ್ಲಿ ಲೋಕೋಪಯೋಗಿ ಇಲಾಖೆ, ಎಸ್ಕಾಂ, ನೀರು ಸರಬರಾಜು ಮಂಡಳಿ ಹಾಗೂ ಇತರೆ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಕೆಲಸ ನಿರ್ವಹಿಸಲು ಹೆಚ್ಚಿನ ಸಮಯ ಅವಶ್ಯವಿರುತ್ತದೆ. |

Scanned with CamScanner

- ಬೆಳಗಾವಿ ನಗರದಲ್ಲಿ ಸ್ಮಾರ್ಟ್ ರಸ್ತೆ, ಕೇಂದ್ರು ನ... ಬಸ್‌ನಿಲ್ದಾಣ ಹಾಗೂ ಇತರೆ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕೇಂದ್ರು ರಕ್ಷಣಾ ಇಲಾಖೆಯಿಂದ ನಿರಾಕ್ಷೇಪಣಾ ಪತ್ರದ ಅವಶ್ಯಕತೆಯಿದ್ದು, ಅಂತಹ ಒಪ್ಪಿಗೆಗಳನ್ನು ಪಡೆಯುವಲ್ಲಿಯೂ ಸಹ ವಿಳಂಬವಾಗಿರುತ್ತದೆ. ಬಹು ಉಪಯೋಗಿ ವಾಣಿಜ್ಯ ಕೇಂದ್ರು ಅಭಿವೃದ್ಧಿ ಟಿಳಕವಾಡಿ, ಯೋಜನೆಯಲ್ಲಿ ನ್ಯಾಯಾಲಯದ ವ್ಯಾಜ್ಯ ಇರುವುದರಿಂದ ಕೂಡಾ ಯೋಜನಾ ಅನುಷ್ಠಾನದಲ್ಲಿ ವಿಳಂಬವಾಗಿರುತ್ತದೆ.

- ಅತಿಯಾದ ಮಳೆ ಮತ್ತು ಕೋವಿಡ್ -19ರ ಪರಿಣಾಮದಿಂದಾಗಿ ಕಾಮಗಾರಿ ಅನುಷ್ಠಾನದಲ್ಲಿ ವ್ಯತ್ಯಯ ಉಂಟಾಗಿರುತ್ತದೆ.

ಆದಾಗ್ಯೂ, ಸರ್ಕಾರದಿಂದ ಕೈಗೊಂಡಿರುವ ಪೂರಕ ಕ್ರಮಗಳ ಮೂಲಕ ಯೋಜನೆಯ ಅನುಷ್ಠಾನಕ್ಕೆ ಎದುರಾಗಿರುವ ಮೇಲಿನ ಸವಾಲುಗಳಿಗೆ ಸೂಕ್ತ ಪರಿಹಾರಗಳನ್ನು ಕಂಡುಕೊಂಡು ಈಗ ಕಾಮಗಾರಿಗಳನ್ನು ತ್ವರಿತವಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ನಿಯಮಿತವಾಗಿ ಪ್ರಗತಿ ಪರಿಶೀಲನಾ ಸಭೆಗಳನ್ನು ನಡೆಸಲಾಗುತ್ತಿದೆ.

ಮೇಲಿನ ಎಲ್ಲಾ ಕ್ರಮಗಳ ಪರಿಣಾಮವಾಗಿ, ಪ್ರಸ್ತುತ ಸ್ಮಾರ್ಟ್ ಸಿಟಿ ಅನುದಾನ ಮತ್ತು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಈವರೆಗೆ ಬೆಳಗಾವಿ ನಗರದಲ್ಲಿ ಸಾಧಿಸಿರುವ ಭೌತಿಕ ಪ್ರಗತಿ ಕೆಳಕಂಡಂತಿದೆ;

**ಕೋಷ್ಟಕ -1 ಸ್ಮಾರ್ಟ್ ಸಿಟಿ ಅನುದಾನದಡಿ ಕೈಗೊಂಡ ಕಾಮಗಾರಿಗಳ ಭೌತಿಕ ಪ್ರಗತಿ**

| ಕಾಮಗಾರಿಗಳ ವಿವರ | ಕಾಮಗಾರಿಗಳ ಸಂಖ್ಯೆ | ಕಾಮಗಾರಿಗಳ ಮೊತ್ತ (ರೂ. ಕೋಟಿಗಳಲ್ಲಿ) |
|---|---|---|
| ಪೂರ್ಣಗೊಂಡ ಕಾಮಗಾರಿಗಳು | 40 | 146.70 |
| ಪ್ರಗತಿಯಲ್ಲಿರುವ ಕಾಮಗಾರಿಗಳು | 60 | 662.81 |
| ಟೆಂಡರ್ ಹಂತದಲ್ಲಿರುವ ಕಾಮಗಾರಿಗಳು | 04 | 8.14 |
| ವಿಸ್ತೃತಾ ಯೋಜನಾ ವರದಿ ಹಂತದಲ್ಲಿರುವ ಕಾಮಗಾರಿಗಳು | 0 | 0 |
| ಒಟ್ಟು | **104** | **817.65** |

**ಕೋಷ್ಟಕ -2 ಸಾರ್ವಜನಿಕ ಖಾಸಗಿ ಸಹಭಾಗಿತ್ವದಡಿ ಕೈಗೊಂಡ ಕಾಮಗಾರಿಗಳ ಭೌತಿಕ ಪ್ರಗತಿ**

| ಕಾಮಗಾರಿಗಳ ವಿವರ | ಕಾಮಗಾರಿಗಳ ಸಂಖ್ಯೆ | ಕಾಮಗಾರಿಗಳ ಮೊತ್ತ (ರೂ. ಕೋಟಿಗಳಲ್ಲಿ) |
|---|---|---|
| ಪೂರ್ಣಗೊಂಡ ಕಾಮಗಾರಿಗಳು | 0 | 0 |
| ಪ್ರಗತಿಯಲ್ಲಿರುವ ಕಾಮಗಾರಿಗಳು | 02 | 67.90 |
| ಟೆಂಡರ್ ಹಂತದಲ್ಲಿರುವ ಕಾಮಗಾರಿಗಳು | 04 | 137.06 |
| ವಿಸ್ತೃತಾ ಯೋಜನಾ ವರದಿ ಹಂತದಲ್ಲಿರುವ ಕಾಮಗಾರಿಗಳು | 0 | 0 |
| ಒಟ್ಟು | **06** | **204.96** |

Scanned with CamScanner

| | | |
|---|---|---|
| | | ಸ್ಮಾರ್ಟ್ ಸಿಟಿ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕೇಂದ್ರ ನಗರಾಭಿವೃದ್ಧಿ ಸಚಿವಾಲಯವು ಪ್ರಸ್ತುತ ಜೂನ್-2023 ರವರಗೆ ಕಾಲಾವಕಾಶ ನೀಡಿದ್ದು, ಸ್ಮಾರ್ಟ್ ಸಿಟಿ ಕಾಮಗಾರಿಗಳ ಸಮರ್ಪಕ ಹಾಗೂ ತ್ವರಿತ ಗತಿಯ ಅನುಷ್ಠಾನವನ್ನು ಸಾಧಿಸಲು ಬೆಳಗಾವಿ ಸ್ಮಾರ್ಟ್ ನಗರಕ್ಕೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. |
| ಆ) | ಮೂಲಸೌಕರ್ಯ ಅಭಿವೃದ್ಧಿ ಗುರಿಯ ಈ ಯೋಜನೆ ಕೇವಲ ರಸ್ತೆ ಕಾಮಗಾರಿಗಳಿಗೆ ಮಾತ್ರ ಸೀಮಿತವಾಗಿದೆಯೆಂಬ ವರದಿಯನ್ನು ಸರ್ಕಾರ ಗಮನಿಸಿದೆಯೇ; | ಬೆಳಗಾವಿ ಸ್ಮಾರ್ಟ್ ಸಿಟಿ ಯೋಜನೆಯಡಿ ಕೇವಲ ರಸ್ತೆ ಕಾಮಗಾರಿಗಳಲ್ಲದೇ 07 ಉದ್ಯಾನವನಗಳ ಅಭಿವೃದ್ಧಿ, ಕಣಬರ್ಗಿ ಕೆರೆ ಮತ್ತು ಕೋಟೆಕೆರೆ ಪ್ರದೇಶಗಳ ಅಭಿವೃದ್ಧಿ, 11 ಕುಡಿಯುವ ನೀರಿನ ಘಟಕಗಳು, ಸೆಂಟ್ರಲ್ ಬಸ್ ಟರ್ಮಿನಲ್, ಶೈಕ್ಷಣಿಕ ಅಭಿವೃದ್ಧಿ ಹಿನ್ನಲೆಯಲ್ಲಿ 07 ಸ್ಮಾರ್ಟ್ ಕ್ಲಾಸ್ ರೂಮ್ ಗಳ ಅಭಿವೃದ್ಧಿ, ಆರೋಗ್ಯದ ಹಿತದೃಷ್ಠಿಯಿಂದ 10 ಹಾಸಿಗೆಯುಳ್ಳ ಆಸ್ಪತ್ರೆ ಹಾಗೂ 30 ಹಾಸಿಗೆಯುಳ್ಳ ಆರೋಗ್ಯ ಕೇಂದ್ರದ ಅಭಿವೃದ್ಧಿ, ಕಮಾಂಡ್ & ಕಂಟ್ರೋಲ್ ಕೇಂದ್ರ 39 ಸ್ಮಾರ್ಟ್ ಬಸ್ ನಿಲ್ದಾಣಗಳು ಸೇರಿದಂತೆ ಹಲವಾರು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಅಭಿವೃದ್ಧಿಪಡಿಸಲಾಗುತ್ತಿದೆ. |
| ಇ) | ಹಸಿರುಕರಣ, ಪಾರ್ಕಿಂಗ್, ಡಿಜಿಟಲೀಕರಣ, ಉದ್ಯಾನ, ಕುಡಿಯುವ ನೀರಿನಂತರಹ ಪರಿಸರ ಪೂರಕ ಕಾಮಗಾರಿಗಳು ಇನ್ನೂ ಪ್ರಾರಂಭವಾಗದಿರಲು ಇರುವ ತೊಂದರೆಗಳೇನು; | ಬೆಳಗಾವಿ ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ಹಸಿರುಕರಣ, ಪಾರ್ಕಿಂಗ್, ಡಿಜಿಟಲೀಕರಣ, ಉದ್ಯಾನವನ, ಕುಡಿಯುವ ನೀರಿನ ಯೋಜನೆ ಹೀಗೆ ಹಲವಾರು ಪರಿಸರ ಪೂರಕ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.<br>i. ಹಸಿರೀಕರಣ ಭಾಗವಾಗಿ ರಸ್ತೆ ವಿಭಜಕಗಳಲ್ಲಿ ಗಿಡಗಳನ್ನು ನೆಡಲಾಗಿದ್ದು, ಕೆರೆ ಮತ್ತು ಉದ್ಯಾನವನಗಳನ್ನು ಅಭಿವೃದ್ಧಿ ಮಾಡುವ ಮೂಲಕ ಹಸಿರೀಕರಣಕ್ಕೆ ಉತ್ತೇಜನ ನೀಡಲಾಗಿದೆ.<br>ii. ಡಿಜಿಟಲೀಕರಣ ಭಾಗವಾಗಿ ಕಮಾಂಡ್ & ಕಂಟ್ರೋಲ್ ಸೆಂಟರ್ ನ ಮೂಲಕ ಸ್ಮಾರ್ಟ್ ಪೋಲ್, ಸ್ಮಾರ್ಟ್ ಬಸ್ ಶೆಲ್ಟರ್, ಸ್ಮಾರ್ಟ್ ವಾಟರ್ ಮೀಟರ, ಇಂಟಲಿಜೆಂಟ್ ಟ್ರಾನ್ಸ್ ಪೋರ್ಟ್ ವ್ಯವಸ್ಥೆ, ಸುಗಮ ಸಾರಿಗೆ ವ್ಯವಸ್ಥೆ, ಡಿಜಿಟಲ್ ಗ್ರಂಥಾಲಯ ಹಾಗೂ ಬೆಳಗಾವಿ ಸಿಟಿಜೆನ್ ಆಪ್ ಮೂಲಕ ಡಿಜಿಟಲೀಕರಣವನ್ನು ಉತ್ತೇಜಿಸಲಾಗಿದೆ.<br>iii. ನಾಗರೀಕರಿಗೆ ಅನುಕೂಲವಾಗುವಂತೆ 07 ವಿಷಯಾಧಾರಿತ ಉದ್ಯಾನವನಗಳನ್ನು (Theme Based) ರೀತಿಯಲ್ಲಿ ಅಭಿವೃದ್ಧಿಪಡಿಸಲಾಗಿದೆ. ಕುಡಿಯುವ ನೀರಿಗಾಗಿ ಪ್ರಮುಖ ಸ್ಥಳಗಳಲ್ಲಿ 11 ಸ್ಮಾರ್ಟ್ ನೀರಿನ ಘಟಕಗಳನ್ನು (Drinking Water Kiosks) ಅಳವಡಿಸಲಾಗಿದೆ. |
| ಈ) | ಸ್ಮಾರ್ಟ್ ಸಿಟಿ ಯೋಜನೆಯಡಿ ಈವರೆವಿಗೆ ಬೆಳಗಾವಿ ಜಿಲ್ಲೆಗೆ ಬಿಡುಗಡೆಗೊಂಡ ಅನುದಾನವೆಷ್ಟು? (ಖರ್ಚಾದ ಅನುದಾನದ ವಿವರ ಒದಗಿಸುವುದು) | ಸ್ಮಾರ್ಟ್ ಸಿಟಿ ಯೋಜನೆಯಡಿ ಬೆಳಗಾವಿ ನಗರಕ್ಕೆ ಇಲ್ಲಿಯವರೆಗೆ ಕೇಂದ್ರ ಸರ್ಕಾರದಿಂದ ರೂ.294.00 ಕೋಟಿ ಹಾಗೂ ರಾಜ್ಯ ಸರ್ಕಾರದಿಂದ ರೂ.300.00 ಕೋಟಿಯಂತೆ ಒಟ್ಟು ರೂ.594.00 ಕೋಟಿ ಬಿಡುಗಡೆಯಾಗಿದ್ದು, ರೂ.535.55 ಕೋಟಿ ವೆಚ್ಚ ಮಾಡಲಾಗಿರುತ್ತದೆ. ಆರ್ಥಿಕ ಪ್ರಗತಿಯು ಶೇಕಡಾ 90% ರಷ್ಟು ಆಗಿದೆ. |

ಸಂಖ್ಯೆ:ನಅಇ 146 ಸಿಎಸ್ಎಸ್ 2021

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

Scanned with CamScanner